# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ರವರ ನ್ಯಾಯಾಲಯ, ಶೃಂಗೇರಿ

**ಸಿ.ಸಿ.ನಂಃ 270/2022**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಶೃಂಗೇರಿ ಪೊಲೀಸರು

-: **ವಿರುದ್ಧ** :-

**ಆರೋಪಿಃ** 1. ಕೆ.ಎನ್. ವಾಸುದೇವ,
ಬಿನ್ ನಾನಯ್ಯ.
ವಯಸ್ಸು 35 ವರ್ಷ,
ವಾಸಃ ನಂ. 376, 1 ನೇ ಮುಖ್ಯ ರಸ್ತೆ,
ಟಿ. ದಾರಸರಹಳ್ಳಿ,
ಬೆಂಗಳೂರು

## ದೋಷಾರೋಪಣೆ

ಶ್ರೀ. ಜೀತು ಆರ್.ಎಸ್., ಬಿ.ಎ.ಎಲ್., ಎಲ್‌ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಶೃಂಗೇರಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 20.01.2018 ರಂದು ರಾತ್ರಿ 2.30 ಗಂಟೆಗೆ ಶೃಂಗೇರಿ ಪೋಲೀಸ್ ಠಾಣಾ ಸರಹದ್ದಿನ ಶೃಂಗೇರಿ ಪಟ್ಟಣದ ಭಾರತೀ ಬೀದಿಯಲ್ಲಿರುವ ಶುಭೋದಯ ಲಾಡ್ಜ್ ನಲ್ಲಿ ಆರೋಪಿಯಾದ ನೀವು ರೂಂ ನಂ. 208 ನ್ನು ಬಾಡಿಗೆಗೆ ಪಡೆದು ನಿಮ್ಮ ಕೊಠಡಿಗೆ ಅಳವಡಿಸಲಾಗಿದ್ದ ಎಲ್.ಜಿ. ಕಂಪನಿಯ 24 ಇಂಚಿನ ಟಿವಿಯನ್ನು ರೂಮಿನಿಂದ ಹೊರಗಡೆ ಹೋಗುವಾಗ ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 380 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದವನ್ನು ಮಾಡಿದ್ದರಿಂದ, ಅದು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

**ಪ್ರಶ್ನೆ-1** : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು

**ಪ್ರಶ್ನೆ-2** : ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

**ಉತ್ತರಃ** : ವಿಚಾರಣೆಯಾಗಬೇಕು

(ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ಸಹಿ /- 18.12.2025**
**(ಜೀತು ಆರ್.ಎಸ್.)**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಶೃಂಗೇರಿ.**

**ಆರೋಪಿಯ ಸಹಿಃ**